## ಕರಾವಿಪ ತ್ರೈವಾರ್ಷಿಕ ಚುನಾವಣೆ – 2016 – ಎಲ್ಲಾ ಉಮೇದುವಾರರಿಗೆ

**19–11–2016**

### ಸ್ಪಷ್ಟೀಕರಣ

ಒಂದು ಗೊಂದಲವು ಉದ್ಭವಿಸಿರುವುದರಿಂದ ಸ್ಪಷ್ಟೀಕರಣವನ್ನು ನೀಡುತ್ತಿದ್ದೇನೆ. "ಚುನಾವಣಾ ಕಾರ್ಯಕ್ಕೆ ಕಚೇರಿಯ ಸಿಬ್ಬಂದಿಯ ಸಹಾಯ ಬಳಸಿಕೊಂಡಿದ್ದೇನೆ" ಮತ್ತು ಆ ಮೂಲಕ ಬೈಲಾವನ್ನು ಉಲ್ಲಂಘಿಸಿದ್ದೇನೆಂಬ ತಪ್ಪು ಕಲ್ಪನೆ ಹರಡಿದೆ. ಬೈಲಾ ಪ್ರಕಾರ ಕಚೇರಿಯ ಸಿಬ್ಬಂದಿಯನ್ನು ಚುನಾವಣಾ ಕಾರ್ಯಕ್ಕೆ ನೇಮಿಸಿಕೊಳ್ಳುವ ಹಾಗಿಲ್ಲ ಎಂಬುದು ನಿಜ. ನಾನು ಅವರ ಸಹಾಯವನ್ನು ಮಾತ್ರ ಪಡೆದುಕೊಳ್ಳುತ್ತಿದ್ದೇನೆ. ನೇಮಕ ಬೇರೆ, ಸಹಾಯ ಬೇರೆ. ಮೊದಲನೆಯದಾಗಿ, ಮತಪತ್ರಗಳನ್ನು ಲಕೋಟೆಗೆ ತುಂಬುವ ಜವಾಬ್ದಾರಿ ಸಂಪೂರ್ಣವಾಗಿ ನನ್ನ ಮತ್ತು ನಾನು ನೇಮಿಸಿಕೊಂಡಿರುವ ಸಹಾಯಕರ ಮೇಲಿದೆ. ಈ ಕಾರ್ಯಕ್ಕೆ ಕಚೇರಿಯ ಸಿಬ್ಬಂದಿಯನ್ನು ನಾನು ಎಂದೂ ಬಳಸಿಕೊಂಡಿಲ್ಲ. ಎರಡನೆಯದಾಗಿ, ಮತಪತ್ರಗಳು ಸಂಪೂರ್ಣವಾಗಿ ನನ್ನ ವಶದಲ್ಲಿದೆ. ಅಪ್ಪಣೆ ಇಲ್ಲದೆ ಕಚೇರಿಯ ಸಿಬ್ಬಂದಿಯವರು ನನ್ನ ಕೊಠಡಿಯನ್ನು ಪ್ರವೇಶಿಸುವುದಿಲ್ಲ. ಕಚೇರಿಯ ಸಿಬ್ಬಂದಿ ವರ್ಗದವರನ್ನು ಹೊರಗಿಟ್ಟು ನಾನು ನೇಮಿಸಿಕೊಂಡಿರುವವರು ಮಾತ್ರ ಮತಪತ್ರಗಳನ್ನು ಲಕೋಟೆಗಳಿಗೆ ತುಂಬುವ ಕಾರ್ಯದಲ್ಲಿ ನಿರತರಾಗಿರುವುದನ್ನು ಕಣ್ಣಾರೆ ನೋಡಿರುವ ಮತ್ತು ಕಚೇರಿ ಸಿಬ್ಬಂದಿಯಲ್ಲದ ದಾನಿ ಸದಸ್ಯರೊಬ್ಬರು ಇದಕ್ಕೆ ಸಾಕ್ಷಿ. ಇಂತಹ ಕಾರ್ಯದಲ್ಲಿ ನಿರತರಾದವರೆಲ್ಲರೂ ಖ್ಯಾತ ಮನೋವಿಜ್ಞಾನಿ ಡಾ॥ ಸಿ.ಆರ್. ಚಂದ್ರಶೇಖರ್‌ರವರ ನೇತೃತ್ವದ 'ಸಮಾಧಾನ' ಎಂಬ ಸರ್ಕಾರೇತರ ಸಂಸ್ಥೆಯ ಸ್ವಯಂಸೇವಕರಾಗಿದ್ದಾರೆ.

ದಿನಾಂಕ 16–11–2016 ರವರೆಗೆ, ನಾನು ಒಬ್ಬ ಸಹಾಯಕನ ಸಹಕಾರದಿಂದ ಮಾತ್ರವೇ ಕಾರ್ಯವನ್ನು ನಿರ್ವಹಿಸಿದೆ. ಆದರೆ ಇನ್ನು ಮುಂದೆ ಇದು ಅಸಾಧ್ಯ. ಹಾಗಾಗಿ (1) ಅಂಚೆ ಚೀಟಿಗಳನ್ನು ಹಚ್ಚುವುದು (2) ಸ್ವೀಕೃತಿ ಪ್ರಮಾಣ ಪತ್ರಗಳನ್ನು ಲಕೋಟೆಯೊಳಗೆ ಲಗತ್ತಿಸುವುದು (3) ಸೂಚನಾ ಪತ್ರ ಮತ್ತು ಎರಡು ಲಕೋಟೆಗಳನ್ನು ದೊಡ್ಡ ಲಕೋಟೆಯ ಒಳಗೆ ಇಡುವುದು ಮತ್ತು (4) ಸಂಖ್ಯಾ ಕ್ರಮದಲ್ಲಿ ಜೋಡಿಸಿ ನಂತರ ಪರಿಶೀಲಿಸುವುದು ಕೆಲಸಗಳನ್ನು 8000 ಲಕೋಟೆಗಳಿಗೆ ಇಬ್ಬರು ಅಥವಾ ಮೂವರು ಮಾಡಬೇಕು ಎಂದರೆ ದೈವಿಕ ಶಕ್ತಿ ಇರುವವರಿಗಷ್ಟೇ ಸಾಧ್ಯ. ಇಷ್ಟು ಸಾಲದೆಂಬಂತೆ ರೂ. 500/– ಮತ್ತು 1000/–ಗಳ ಅಮಾನ್ಯತೆಯಿಂದಾಗಿ ಬ್ಯಾಂಕ್ ಮತ್ತು ಅಂಚೆ ಕಚೇರಿಗಳಲ್ಲಿ ಊಹೆಗೂ ಮೀರಿದ ಪ್ರಮಾಣದಲ್ಲಿ ಅಡಚಣೆ ಉಂಟಾಯಿತು. ಸೂಕ್ತ ಸಹಾಯಕರು ಸಕಾಲದಲ್ಲಿ ಸಿಗದಿದ್ದರಿಂದ ಮೇಲೆ ತಿಳಿಸಿದ ನಾಲ್ಕು ಕಾರ್ಯಗಳಿಗೆ ಕಚೇರಿ ಸಿಬ್ಬಂದಿಯನ್ನು ಬಳಸಿಕೊಳ್ಳಬೇಕಾಯಿತು. ಬಹುಶ: ತಾವು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡಿದ್ದೀರಿ ಎಂದು ತಿಳಿಯುತ್ತೇನೆ.

ಸಹಿ

(ಎಂ.ಆರ್. ನಂದನ್)
ಚುನಾವಣಾಧಿಕಾರಿ, ಕರಾವಿಪ ತ್ರೈವಾರ್ಷಿಕ ಚುನಾವಣೆ – 2016
ಇ–ಮೇಲ್: nandan.chakrapani@gmail.com